| ಕಾರ್ಯಕ್ರಮ | ಬಿ.ಎ. |
| --- | --- |
| ಸೆಮಿಸ್ಟರ್ | ತೃತೀಯ |
| ಪತ್ರಿಕೆ | ಕನ್ನಡ ಸೊಲ್ಲರಿಮೆ ಭಾಗ-1 |
| ವಿಷಯ | ಐಚ್ಛಿಕ ಕನ್ನಡ |
| ವಿಶ್ವವಿದ್ಯಾನಿಲಯ | ಕುವೆಂಪು ವಿ.ವಿ., ಶಂಕರಘಟ್ಟ |
| ಅವಧಿ | 1 |

# ಹಿಂದಿನ ತರಗತಿಗಳ ಪುನರ್ಮನನ

- ಹೊಸಗನ್ನಡದಲ್ಲಿ ಬಂದ ಕೃತಿಗಳ ಹಿನ್ನಲೆಯಲ್ಲಿ ಆಧುನಿಕ ಸೊಲ್ಲರಿಮೆ ಪರಿಚಯ
- ಪಾರಂಪರಿಕ ಸೊಲ್ಲರಿಮೆ ಪದ್ಧತಿಗೂ ಆಧುನಿಕ ಸೊಲ್ಲರಿಮೆ ಪದ್ಧತಿಯ ವ್ಯತ್ಯಾಸಗಳು
- ಭಾಷೆಯ ಸ್ವರೂಪವನ್ನು ತಿಳಿಯಲಿ ಇರಬಹುದಾದ ಸೊಲ್ಲರಿಮೆ ವಿಧಗಳ ತಿಳುವಳಿಕೆ
- ಕನ್ನಡಕ್ಕೆ ಇರಬಹುದಾದ ಸೊಲ್ಲರಿಮೆ ಕೃತಿಗಳ ಮೂಲಕ ಭಾಷಾ ನಿಯಮಗಳ ತಿಳುವಳಿಕೆ

# ಕನ್ನಡ ಸೊಲ್ಲರಿಮೆಯ ಸ್ವರೂಪ

ಘಟಕ-8

ಕನ್ನಡ ಸೊಲ್ಲರಿಮೆಯ ಸ್ವರೂಪ

# ಕಲಿಕೆಯ ಉದ್ದೇಶಗಳು

- ಆಧುನಿಕ ಸೊಲ್ಲರಿಮೆಯಿಂದ ಭಾಷಾ ನಿಯಮಗಳು ಸುಲಭವಾಗುತ್ತದೆ
- ಸೊಲ್ಲರಿಮೆಯಿಂದ ಕನ್ನಡ ಪದಗಳ ಬಳಕೆ ಹೆಚ್ಚಾಗುತ್ತದೆ.
- ನಮ್ಮ ಭಾಷೆಯ ಬಳಕೆಯಲ್ಲಿ ಅರಿವಿಗೆ ಬರದ ಕಟ್ಟಲೆಗಳ ಪರಿಚಯವಾಗುತ್ತದೆ.
- ಪದ ಮತ್ತುಪ್ರತ್ಯಯಗಳ ಪರಿಚಯವಾಗುತ್ತದೆ.
- ಮಾತು ಮತ್ತು ಬರಹಗಳಿಗಿರುವ ವ್ಯತ್ಯಾಸಗಳ ಅರಿವಾಗುತ್ತದೆ.

# ಕನ್ನಡ ಸೊಲ್ಲರಿಮೆಯ ಸ್ವರೂಪ

- ಪ್ರತಿ ಭಾಷೆಗೂ ಸೊಲ್ಲರಿಮೆಯ ನಿಯಮಗಳು ಬದಲಾಗುತ್ತದೆ.
- ಪ್ರಾಚೀನ ಸೊಲ್ಲರಿಗರು ಗ್ರಂಥ ಭಾಷೆಯನ್ನು ಗಮನಿಸಿ ಸೊಲ್ಲರಿಮೆ ನಿಯಮ ರಚಿಸಿದ್ದಾರೆ.
- ಆಧುನಿಕ ಸೊಲ್ಲರಿಮೆ ನಿಯಮಗಳು ಪ್ರಾಚೀನ ಸೊಲ್ಲರಿಮೆ ನಿಯಮಗಳನ್ನು ಪರಿಷ್ಕರಿಸುತ್ತದೆ.
- ಅನ್ಯ ಭಾಷಾ ಪದಗಳಿಗೆ ಪರ್ಯಾಯವಾಗಿ ಕನ್ನಡ ಪದಗಳ ಬಳಸುವಂತೆ ಒತ್ತಾಯ
- ಉದಾ: ಪ್ರತ್ಯಯ= ಒಟ್ಟು,ಅಕ್ಷರ=ಬರಿಗೆ ಇತ್ಯಾದಿ

# ಅರಿವಿಗೆ ಎಟುಕದ ಕಟ್ಟಲೆಗಳು

- ನಾವು ಮಾತನಾಡುವಾಗ ಸೊಲ್ಲರಿಮೆಯ ನಿಯಮಗಳನ್ನು ಅರಿಯಲು ಹೋಗುವುದಿಲ್ಲ.
- ಪದಗಳು ಸೊಲ್ಲಿನ ಎಲುಬು ಗೂಡು ಮಾತ್ರ. ಅದಕ್ಕೆ ರೂಪ ಕೊಡಲು ಕಟ್ಟಲೆ ಅವಶ್ಯಕ.
- ಪದಗಳನ್ನು ಜೋಡಿಸಿ ಅರ್ಥವಾಗಿಸುವಲ್ಲಿ ಪ್ರತ್ಯಯಗಳ ಪಾತ್ರ ಮಹತ್ವವಾದುದು.
- ಪದಗಳಿಂದ ಸೊಲ್ಲು ಏನು ಹೇಳುತ್ತದೆ ಎಂದು ಹೇಳುವುದು ಕಷ್ಟ.
- ಪದಗಳನ್ನು ಬೇರೆ ಬೇರೆ ಒಟ್ಟುಗಳೊಂದಿಗೆ ಸೇರಿಸಿ ಬೇರೆ ಬೇರೆ ಅರ್ಥಗಳನ್ನು ಪಡೆಯಬಹುದು.

# ಮಾತು ಮತ್ತು ಬರಹದ ನಡುವಿನ ವ್ಯತ್ಯಾಸ

- ಮಾತಿನಲ್ಲಿ ಸೊಲ್ಲರಿಮೆಯ ಕಟ್ಟಲೆಗಳನ್ನು ಬಳಸುವಷ್ಟು ಸರಳವಾಗಿ ಬರವಣಿಗೆಯಲ್ಲಿ ಬಳಸಲು ಸಾಧ್ಯವಿಲ್ಲ.
- ಬರಹ ತಿಳಿಯಲು ಪದಜ್ಞಾನದ ಜೊತೆಗೆ ಸೊಲ್ಲರಿಮೆಯ ಜ್ಞಾನ ಅಗತ್ಯ.
- ಆಡುನುಡಿಯಿಂದ ಮತ್ತೊಂದು ನುಡಿಗೆ, ಮಾತಿನಿಂದ ಬರಹಕ್ಕೆ ಕಟ್ಟಲೆಗಳು ಬೇರೆ ಬೇರೆಯಾಗಿರುತ್ತವೆ.

1.ಮಾತಿಗೂ ಬರಹಕ್ಕೂ ಗುರಿ ಮತ್ತು ಉದ್ದೇಶಗಳು ಭಿನ್ನವಾಗಿರುತ್ತದೆ.

•ಮಾತನಾಡುವಾಗ ಕನಿಷ್ಠ ಒಬ್ಬ ವ್ಯಕ್ತಿಯಾದರೂ ನಮ್ಮ ಎದುರಿಗೆ ಇರಬೇಕು.

•ಮಾತಿನಲ್ಲಿ ಹೇಳಲಾಗದ, ನೇರವಾಗಿ ಮಾತನಾಡಲು ಸಾಧ್ಯವಾಗದಿದ್ದಾಗ ಬರಹವನ್ನು ಬಳಸುತ್ತೇವೆ.

2. ಮಾತು ಬರಹದ ಮಾಧ್ಯಮ ಬೇರೆಯಾಗಿರುತ್ತದೆ

•ಮಾತಿನ ಮಾಧ್ಯಮ ಧ್ವನಿ, ಬರಹದ ಮಾಧ್ಯಮ ಅಕ್ಷರ

•ಮಾತು ಆಡಿದ ತಕ್ಷಣ ಮರೆಯಾಗಿರುತ್ತದೆ. ಬರಹವನ್ನು ದಾಖಲಿಸಬಹುದು.

3. ಮಾತು ಪ್ರಕೃತಿ ; ಬರಹ ಸಂಸ್ಕೃತಿ –

- ದೈನಂದಿನ ವ್ಯವಹಾರದಲ್ಲಿ ಬರಹಕ್ಕಿಂತ ಮಾತಿನ ಬಳಕೆ ಜಾಸ್ತಿ.
- ನಾವು ನುಡಿಯುವ ಎಲ್ಲಾ ಮಾತುಗಳನ್ನು ಬರೆಯಲು ಸಾಧ್ಯವಿಲ್ಲ.

4. ಮಾತಿನ ವೇಗ ಹೆಚ್ಚು; ಬರಹದ ವೇಗ ಕಡಿಮೆ-

- ಮಾತಿನಲ್ಲಿ ಒಂದು ಪದಗಳನ್ನು ಇನ್ನೊಂದು ಪದಗಳನ್ನು ಕಾಲ ವಿಳಂಬವಿಲ್ಲದೆ ಜೋಡಿಸಿ ಮಾತನಾಡುತ್ತೇವೆ.
- ಬರಹವನ್ನು ಬರೆಯುವಾಗ ನಡುವೆ ಜಾಗ ಬಿಟ್ಟು ಬಿಡಿ ಬಿಡಿಯಾಗಿ ಬರೆಯುತ್ತೇವೆ.

5. ಮಾತು ಮಿಂಚು; ಬರಹ ಬೆಳಕು:

- ಮಾತನಾಡುವಾಗ ಆಲೋಚಿಸುವುದನ್ನು ಒಟ್ಟಾಗಿ ಮಾಡುತ್ತೇವೆ.
- ಬರಹ ಬೆಳಕಿನಂತೆ ಸ್ಪಷ್ಟ ಆಲೋಚಿಸಿ ನಂತರದಲ್ಲಿ ಬರೆಯುತ್ತೇವೆ.

6. ಮಾತು ಶಕ್ತಿ; ಬರಹ ಯುಕ್ತಿ:

- ಮಾತನಾಡುವ ಶಕ್ತಿ ಹುಟ್ಟಿನಿಂದಲೇ ಬಂದಿರುತ್ತದೆ.
- ಮಗು ಬರೆಯಲು ಪ್ರಯತ್ನ ಪೂರ್ವಕವಾಗಿ ಅಕ್ಷರಗಳನ್ನು ಕಲಿಯಬೇಕಾಗುತ್ತದೆ.

7. ಮಾತಿನಲ್ಲಿ ಸನ್ನೆಗಳ ಬಳಕೆ; ಬರಹದಲ್ಲಿ ಚಿಹ್ನೆಗಳ ಬಳಕೆ-

- ಪ್ರತಿನಿತ್ಯ ಆಡುವ ಮಾತಿನಲ್ಲಿ ಶೇ. 60ರಷ್ಟು ಧ್ವನಿಯನ್ನು ಬಳಸಿ ಉಳಿದಂತೆ ಸನ್ನೆಗಳನ್ನುಬಳಸುತ್ತೇವೆ.
- ಬರಹದಲ್ಲಿ ಸನ್ನೆಯ ಬದಲಿಗೆ ಚಿಹ್ನೆಗಳನ್ನು ಬಳಸಬಹುದು.

8.ಮಾತಿನ ಸಂವಹನಕ್ಕೆ ಮಿತಿ ಇದೆ; ಬರಹಕ್ಕಿಲ್ಲ

- ಮಾತು ಯಾವಾಗಲೂ ಕೇಳುಗನನ್ನು ಅವಲಂಬಿಸಿರುತ್ತದೆ.
- ಬರಹಕ್ಕೆ ಕಾಲ, ದೇಶ, ಸಮಯಗಳ ಮಿತಿ ಇಲ್ಲ.

# ಸಾರಾಂಶ

- ಪ್ರತಿಯೊಂದು ಭಾಷೆಗೂ ತನ್ನದೆ ಆದ ಸೊಲ್ಲರಿಮೆಯ ನಿಯಮಗಳಿವೆ.
- ಮಾನವ ತಾನು ಮಾತನಾಡಬೇಕಾದರೆ ಅವುಗಳ ಅಸ್ತಿತ್ವ ಅವನ ಅರಿವಿಗೆ ಬರುವುದಿಲ್ಲ.
- ಸೊಲ್ಲರಿಮೆಯ ಕಟ್ಟಲೆಗಳ ಅರಿವಿಲ್ಲದಿದ್ದರೆ ಬೇರೆಯವರ ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.
- ನಾವು ಮಾತಾಡುವ ಮಾತಿಗೂ ಬರವಣಿಗೆಗೂ ಹಲವಾರು ವ್ಯತ್ಯಾಸಗಳಿವೆ.
- ಬರಹವನ್ನು ಮಾತಾಗಿಸುವಲ್ಲಿ, ಓದುವಲ್ಲಿ, ಕಲಿಯುವಲ್ಲಿ ಸೊಲ್ಲರಿಮೆಯ ನಿಯಮಗಳು ಮುಖ್ಯ.

# 1. ಪ್ರಾಚೀನ ಸೊಲ್ಲರಿಗರು---ಭಾಷೆಯ ಪ್ರಭಾವದಿಂದ ಕನ್ನಡ ಸೊಲ್ಲರಿಮೆ ಹೇಳಿದರು

ಅ) ಪ್ರಾಕೃತ

ಆ) ಇಂಗ್ಲೀಷ್

ಇ) ಸಂಸ್ಕೃತ

ಈ) ಪೋರ್ಚುಗೀಸ್

ಉತ್ತರ: ಇ) ಸಂಸ್ಕೃತ

# 2. ಪದಗಳು ಸೊಲ್ಲಿನ ಎಲುಬುಗೂಡು ಮಾತ್ರ---- ಎಂದು ಹೇಳಿದವರು

ಅ) ಡಿ.ಎನ್. ಶಂಕರಭಟ್ಟ

ಆ) ತೀ.ನಂ.ಶ್ರೀ

ಇ) ಎಚ್.ಎಸ್.ಬಿಳಿಗಿರಿ

ಈ) ಬಿ.ಬಿ.ರಾಜಪುರೋಹಿತ

ಉತ್ತರ: ಅ) ಡಿ.ಎನ್. ಶಂಕರಭಟ್ಟ

# 3. ಬರಹದ ಮಾಧ್ಯಮ ----

ಅ) ಧ್ವನಿ ಅಥವಾ ಉಲಿ

ಆ) ಅಕ್ಷರ ಅಥವಾ ಬರಿಗೆ

ಇ) ಪದ ಮತ್ತು ಪ್ರತ್ಯಯ

ಈ) ಧ್ವನಿ ಮತ್ತು ಪದ

ಉತ್ತರ: ಆ) ಅಕ್ಷರ ಅಥವಾ ಬರಿಗೆ

# 4. ಮಾತು ಪ್ರಕೃತಿ; ಬರಹ ---

ಅ) ವಿಕೃತಿ

ಆ) ಸಂಸ್ಕೃತಿ

ಇ) ಪ್ರತಿಕೃತಿ

ಈ) ಆಕೃತಿ

ಉತ್ತರ: ಆ) ಸಂಸ್ಕೃತಿ

5. ಮಾತಿನಲ್ಲಿ --- ಬಳಕೆ; ಬರಹದಲ್ಲಿ ಚಿಹ್ನೆ ಬಳಕೆ

ಅ)ಪದ

ಆ) ಧ್ವನಿ

ಇ) ಪ್ರತ್ಯಯ

ಈ) ಸನ್ನೆ

ಉತ್ತರ: ಈ) ಸನ್ನೆ